## ಎಲ್ಲಿಗೆ ಹೋಯಿತು ಶುಚಿತ್ವ?

ಕನ್ನಡ ಕಲರ್ಸ್‌ನ 'ಗೀತಾ'ದಲ್ಲಿ ಗೀತಾ ತನ್ನ ಕಾಲೇಜಿನ ಶುಲ್ಕ ಭರಿಸಲು, ಮುಖಗವಸು ಸಿದ್ಧಪಡಿಸುವ ಕಾಯಕ ಆರಂಭಿಸುತ್ತಾಳೆ. ಅದಕ್ಕಾಗಿ ಪರಿಚಯಸ್ಥರ ಮೂಲಕ ಹೊಲಿಗೆ ಯಂತ್ರ ಬಾಡಿಗೆಗೆ ಪಡೆಯುತ್ತಾಳೆ. ನಂತರ ಮುಖಗವಸು ತಯಾರಿಕೆಗೆ ಕಚ್ಚಾ ಬಟ್ಟೆಗಾಗಿ ಅಲ್ಲಿ ಇಲ್ಲಿ, ಟೈಲರಿಂಗ್ ಶಾಪ್‌ಗಳಲ್ಲಿ ವೇಸ್ಟ್ ಬಟ್ಟೆಗಳನ್ನು ಸಂಗ್ರಹಿಸಿ ಮಾಸ್ಕ್ ತಯಾರಿಸಿ ತನ್ನ ಗುರಿಗಿಂತ ಹೆಚ್ಚು ಸಂಪಾದನೆ ಮಾಡುತ್ತಾಳೆ.

ಇಲ್ಲಿ ಆರೋಗ್ಯದ ದೃಷ್ಟಿಯಿಂದ ಗಮನಿಸಿದರೆ, ಗೀತಾ ತಾನು ಸಂಗ್ರಹಿಸಿದ ವೇಸ್ಟ್ ಬಟ್ಟೆಗಳನ್ನು ಸ್ವಚ್ಛಗೊಳಸದೆ ಹೇಗಿತ್ತೊ ಹಾಗೆಯೇ ಮಾಸ್ಕ್ ತಯಾರಿಸುತ್ತಾಳೆ. ಅವು ನೆಲದಲ್ಲಿ, ಎಲ್ಲೆಂದರಲ್ಲಿ ಹರಡಿ ಬಿದ್ದಿರುತ್ತವೆ. ಆಗ ದೂಳು– ಕೊಳಕು ಮತ್ತಿಕೊಂಡಿರುತ್ತದೆ. ಅದನ್ನು ಒಮ್ಮೆ ತೊಳೆದು ಒಣಗಿಸಿ ಹೊಲಿದರೆ ತಯಾರಿಸುವವರ ಮತ್ತು ಧರಿಸುವವರ ಆರೋಗ್ಯಕ್ಕೆ ಉತ್ತಮ. ಇಂತಹ ಸೂಕ್ಷ್ಮಗಳು ನಿರ್ದೇಶಕರಿಗೆ ಯಾಕೆ ಹೊಳೆಯಲಿಲ್ಲ ಎಂಬ ಪ್ರಶ್ನೆ ಮನದಲ್ಲಿ ಮೂಡಿತು. ಇಂತಹ ದೃಶ್ಯಗಳಿಂದ ಮುಖಗವಸು ತಯಾರಿಸುತ್ತಿರುವವರಿಗೂ 'ಎಂತಹ ಬಟ್ಟೆಯಾದರೂ ಸರಿ' ಎನ್ನುವ ಸಂದೇಶ ನೀಡಿದಂತೆ ಆಗುವುದಿಲ್ಲವೇ? ಇನ್ನು ಮುಂದಾದರೂ ಇಂತಹ ಸೂಕ್ಷ್ಮ ವಿಷಯಗಳ ಬಗ್ಗೆ ನಿಗಾ ವಹಿಸುವರೆಂದು ಆಶಿಸೋಣ.

—ಅರವಿಂದ ಜಿ. ಜೋಷಿ, ಮೈಸೂರು

## ಕೊರೊನಾ ತೊಲಗಲಿ

ಟೀವಿಗಳ ಧಾರಾವಾಹಿಗಳಲ್ಲಿಯೂ 'ಕೊರೊನಾ' ಸುದ್ದಿ ಕೇಳಿ ಅಶ್ಚರ್ಯವಾಯಿತು. ಜನರ ಬಾಯಲ್ಲಿ, ಸಮೂಹ ಮಾಧ್ಯಮಗಳಲ್ಲಿ ಕೊರೊನಾ ಪ್ರತಿಧ್ವನಿಸುತ್ತಿದೆ. ಸರ್ವವ್ಯಾಪಿ ವಕ್ಕರಿಸುವ ಪರಿ ನೋಡಿದರೆ ಅದು ಇನ್ನೊಂದು ಜೀವಕೋಶದಲ್ಲಿ ಮಾತ್ರ ಬದುಕಲು ಸಾಧ್ಯ ಎಂಬ ವೈಜ್ಞಾನಿಕ ಸತ್ಯವನ್ನೇ ಪ್ರಶ್ನಿಸುವಂತಿದೆ.

—ಎಡ್ವರ್ಡ್ ರೋಡ್ರಿಗಸ್ ಎಸ್.ಜೆ. ಬನ್ನೇರುಘಟ್ಟ ರಸ್ತೆ

ವಾರದ ಪತ್ರ

## ಪ್ರಜ್ಞಾ ವಿಕಾಸ 'ಅಂಬೇಡ್ಕರ್'

ಝೀ ಕನ್ನಡ ವಾಹಿನಿಯು 'ಮಹಾನಾಯಕ ಡಾ. ಅಂಬೇಡ್ಕರ್' ಧಾರಾವಾಹಿ ಪ್ರಸ್ತುತಪಡಿಸುತ್ತಿರುವುದು ಸಂತಸದ ಸಂಗತಿ. ಅಂಬೇಡ್ಕರ್, ವೀಕ್ಷಕರ ಅರಿವಿನ ಬೆಳಕಾಗುವುದರಲ್ಲಿ ಸಂದೇಹವಿಲ್ಲ. ನಾಲ್ಕೇ ಕಂತುಗಳಲ್ಲಿ ವೀಕ್ಷಕರ ಮನ ಗೆದ್ದಿದೆ. ಪ್ರತಿ ಶನಿವಾರ, ಭಾನುವಾರ ಸಾಯಂಕಾಲ ಆಗುವುದನ್ನೇ ಕಾತರದಿಂದ ನಿರೀಕ್ಷಿಸುವಂತೆ ಮಾಡಿದೆ. ಅಂಬೇಡ್ಕರ್ ಚಿಂತನೆಗಳನ್ನು ದೃಶ್ಯಮಾಧ್ಯಮದ ಮೂಲಕ ಇಡಿ ಭಾರತವೇ ನೋಡುವಂತಾಗಬೇಕು. ಹೀಗೆಯೇ ಇನ್ನೂ ಹಲವು ಮಹಾನಾಯಕರಾದ ಬುದ್ಧ, ಬಸವ, ಗಾಂಧೀಜಿ, ಬೋಸ್, ನೆಹರೂ, ವಿಶ್ವೇಶ್ವರಯ್ಯ, ಅಬ್ದುಲ್ ಕಲಾಂ, ರಾಜಕುಮಾರ್, ಕುವೆಂಪು, ಕಾರಂತ, ಬೇಂದ್ರೆ ಇವರೆಲ್ಲರ ಜೀವನ ಚರಿತ್ರೆಯನ್ನು ಬೇರೆ, ಬೇರೆ ವಾಹಿನಿಗಳು ಪ್ರಸ್ತುತಪಡಿಸಿದರೆ ಅವುಗಳಿಗೊಂದು ಮೌಲ್ಯ ಬರುತ್ತದೆ.

—ಡಿ. ಅಮೀನಾ ರಾಮನಮಲಿ, ಹರಪನಹಳ್ಳಿ

## ಕಪಾಳಕ್ಕೆ ಬಾರಿಸಬೇಕಿತ್ತು!

ಕಲರ್ಸ್ ಕನ್ನಡದ 'ಗೀತಾ'ದಲ್ಲಿ ಸಂಸದನ ಹೆಂಡತಿ ಬಾನುವಿನ ಅಣ್ಣನ ಕಪಿಚೇಷ್ಟೆ ವಿಪರೀತವಾಗಿದೆ. ಆತನ ಹಾವಭಾವ ಮಾತುಗಾರಿಕೆ ತೀರ ಅಸಹ್ಯವಾಗಿದೆ. ಗೀತಾ ಹಣ ಕಳೆದುಕೊಂಡಾಗ ಅವಳ ಅಣ್ಣ ಹಾಗೂ ವಿಜಯ್ ಕಾಲೇಜಿಗೆ ಬಂದಿರುತ್ತಾರೆ. ಅಲ್ಲಿ ಆಕೆಯ ಅಣ್ಣನ ವರ್ತನೆ ವಾಕರಿಕೆ ತರಿಸುತ್ತದೆ. ಗೀತಾ ಆ ಸಮಯದಲ್ಲಿ ತಲೆ ತಿರುಗುವಂತೆ ಕಪಾಳಕ್ಕೆ ಬಾರಿಸಿದ್ದರೆ ಚೆನ್ನಾಗಿರುತ್ತಿತ್ತು. ನಿಜವಾಗಲೂ ಆ ಅವಕಾಶ ತಪ್ಪಿಸಿಕೊಂಡಳು. ಮುಂದೆ ಸಾಧ್ಯವಾದರೆ ಆ ಕೆಲಸವನ್ನು ಮಾಡಲಿ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ನಿರ್ಬಂಧ ಮೀರದಿರಲಿ

ಸ್ಟಾರ್ ಸುವರ್ಣದ 'ಸಂಘರ್ಷ' ಧಾರಾವಾಹಿಯಲ್ಲಿ ಭೈರಾದೇವಿ, ಜಿಲ್ಲಾಧಿಕಾರಿಗೆ ಕಮಿಷನರ್ ಅನ್ನುತ್ತಾರೆ! ಐಎಎಸ್ ಅಧಿಕಾರಿ, ಡಿ.ಸಿ. ಅಥವಾ ಎ.ಸಿ. ಮತ್ತು ತಾಲ್ಲೂಕು ದಂಡಾಧಿಕಾರಿಗಳು, ನ್ಯಾಯಾಧೀಶರ ಕಾರ್ಯವೈಖರಿ ಮತ್ತು ಅವರಿಗೆ ಇರುವ ಕೆಲವು ನಿರ್ಬಂಧಗಳ ಬಗ್ಗೆ ಗೊತ್ತಿರಬೇಕು. ಒಂದು ಸಂಚಿಕೆಯಲ್ಲಿ ಐ.ಎ.ಎಸ್. ಅಧಿಕಾರಿ, ಭೈರಾದೇವಿಯ ಗಂಡನ ಮನೆಗೆ ಟೀ ಕುಡಿಯಲು ಹೋಗಿರುತ್ತಾರೆ! ಈ ಅಂಶ ಸಂಭಾಷಣಾಕಾರರಿಗೆ ಗೊತ್ತಿರುವುದಿಲ್ಲವೋ, ಗೊತ್ತಿದ್ದೂ ತಪ್ಪು ಸಂದೇಶ ಕೊಡುತ್ತಿರುವುದೋ? ಅವರೇ ಸ್ಪಷ್ಟಪಡಿಸಬೇಕು.

—ರಮಾಮಣಿ, ಚಿತ್ರದುರ್ಗ

## ಹೊಣೆ ಅರಿತು ನಡೆಯಲಿ

ಕಳೆದ ಕೆಲವು ದಿನಗಳಲ್ಲಿ ನಮ್ಮ ಖಾಸಗಿ ಸುದ್ದಿವಾಹಿನಿಗಳು ಪ್ರಸಾರವಾದ ಕೆಲವು ಸಂಗತಿಗಳು ಹೀಗಿದ್ದವು: ಅನಿರೀಕ್ಷಿತವಾಗಿ ನಿಧನ ಹೊಂದಿದ ಒಬ್ಬ ಯುವನಟನ ಅಂತ್ಯಸಂಸ್ಕಾರ ಆಗುವವರೆಗೂ 'ಪಿನ್ ಟು ಪಿನ್' ತೋರಿಸ್ತೀವಿ ಎಂದು ಹೇಳಿ ದಿನಪೂರ್ತಿ ಅಲ್ಲದೇ ಮಾರನೇ ದಿನವೂ ಹಾಲು ತುಪ್ಪದ ವಿಧಿ ವಿಧಾನಗಳನ್ನೂ ಬಿಡದೆ 'ನಮ್ಮಲ್ಲೇ ಮೊದಲು' ಎಂದು ಪ್ರಸಾರ ಮಾಡಲಾಯಿತು.

ಅದಕ್ಕಿಂತ ಒಂದು ದಿನ ಮೊದಲು ಕೊರೊನಾ ಬಗ್ಗೆ ಬೊಬ್ಬೆ ಹಾಕಿ ವೀಕ್ಷಕರನ್ನು ಬೆಚ್ಚಿ ಬೀಳಿಸಿ 'ನಡುಗಿ ಹೋಗ್ತೀರಾ!' 'ಸಾವೇ ನಿಶ್ಚಿತ!' 'ಭೀಕರ ಸತ್ಯ!' 'ಮುಂದೈತೆ ಮಾರಿ ಹಬ್ಬ!' ಹೀಗೆ ಬಾಯಿಗೆ ಬಂದ ಹಾಗೆ ಹೇಳಿ ಸುದ್ದಿಗಳನ್ನು ಪ್ರಸಾರ ಮಾಡುತ್ತಿದ್ದವು. ಆದರೆ ನಟ ಅಸುನೀಗಿದ ದಿನ ಕೊರೊನಾ ವಿಷಯದಲ್ಲಿ ಗಪ್‌ಚುಪ್ ಆಗಿಬಿಟ್ಟಿದ್ದವು. ಅಂದರೆ ಕೊರೊನಾ ಎಲ್ಲಿಗೆ ಹೋಯಿತು? ಒಬ್ಬ ಜನಪ್ರಿಯ ಯುವನಟನ ಹಠಾತ್ ನಿಧನ ನಿಜಕ್ಕೂ ನೋವು ತರುವ ಸಂಗತಿ. ಇಡೀ ಮನುಕುಲ ವಿಪತ್ತಿನಲ್ಲಿರುವ ಸಂಕಷ್ಟದ ದಿನಗಳಲ್ಲಿ ಸುದ್ದಿವಾಹಿನಿಗಳ ಅತಿರೇಕದ ವರ್ತನೆ ನಿಜಕ್ಕೂ ಅಸಹ್ಯ. ಸುದ್ದಿವಾಹಿನಿಗಳಿಗೆ ಮಹತ್ವದ ಜವಾಬ್ದಾರಿ ಇರುತ್ತದೆ. ಕಪೋಲಕಲ್ಪಿತ ಸುದ್ದಿ ಹಾಗೂ ಕ್ಷುಲ್ಲಕ ಪದಬಳಕೆ ಮಾಡುವ ಮೂಲಕ ವೀಕ್ಷಕರನ್ನು ಹೆದರಿಸಿ ನಕಾರಾತ್ಮಕ ಭಾವನೆ ಮೂಡಿಸುವ ಕೆಲಸ ಮಾಡಬಾರದು.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಚಂದನದ ಕಂಪು

ಚಂದನ ವಾಹಿನಿ! ಹೆಸರೇ ಸೂಚಿಸುವಂತೆ ಅದರ ಪ್ರತೀ ಕಾರ್ಯಕ್ರಮಗಳೂ ಚಂದ. ಕೃಷಿ, ಸಾಂಸ್ಕೃತಿಕ, ಶಿಕ್ಷಣ, ವ್ಯಕ್ತಿ ಪರಿಚಯ, ಮನರಂಜನೆ, ಪುಣ್ಯಕ್ಷೇತ್ರಗಳ ದರ್ಶನ ಮತ್ತು ವಸ್ತುನಿಷ್ಠ ವಾರ್ತೆ ಎಲ್ಲವೂ ಮನೋಜ್ಞ. ತನ್ನ ಶ್ರೀಗಂಧದ ಕಂಪನ್ನು ಅದು ಎಂದೂ ಕಳೆದುಕೊಂಡಿಲ್ಲ.

—ಕೆ. ಹೊನ್ನಪ್ಪ, ಕ್ಯಾತ್ಸಂದ್ರ

## ಡಬ್ಬಿಂಗ್ ಸ್ವೀಕರಿಸಿದ್ದಾರೆ

ಸ್ಟಾರ್ ಸುವರ್ಣದ 'ಮಹಾಭಾರತ' ಮತ್ತು 'ರಾಧಾಕೃಷ್ಣ' ಧಾರಾವಾಹಿಗಳ ಜನಪ್ರಿಯತೆ ನೋಡಿದರೆ ಕನ್ನಡಿಗರು ಡಬ್ ಆದ ಧಾರಾವಾಹಿಗಳನ್ನು ಸ್ವೀಕರಿಸಿದ್ದಾರೆ ಎಂದೆನಿಸುತ್ತದೆ. ಮೂರು ದಶಕಗಳ ಹಿಂದೆ ಹಿಂದಿ ಭಾಷೆಯಲ್ಲಿ ಪ್ರಸಾರವಾದ್ದ ಈ ಧಾರಾವಾಹಿಗಳನ್ನು ಭಾಷಾ ಸಮಸ್ಯೆಯಿಂದ ಕನ್ನಡಿಗರು ಸಂಪೂರ್ಣವಾಗಿ ಆಸ್ವಾದಿಸಲಾಗಿರಲಿಲ್ಲ. ಇಂದು ಮನೆಮಂದಿಯೆಲ್ಲಾ ಒಟ್ಟಿಗೆ ಕುಳಿತು ಅವುಗಳನ್ನು ಆಸ್ವಾದಿಸುತ್ತಿದ್ದಾರೆ. ಡಬ್ಬಿಂಗ್ ಮಾತಿಗೂ ತುಟಿ ಚಲನೆಗೂ ಯಾವುದೇ ಸಂಬಂಧ ಇರುವುದಿಲ್ಲ ಎನ್ನುವ ಡಬ್ಬಿಂಗ್ ವಿರೋಧಿಗಳ ಆಕ್ಷೇಪಕ್ಕೆ ಮನ್ನಣೆ ಸಿಕ್ಕಿಲ್ಲ.

—ರಮಾನಂದ ಶರ್ಮಾ, ಬೆಂಗಳೂರು